doc-544
T.P-2

Reg No B G 155 12—9—72

In State First GoldenJubilee Celebrated Paper 'Satyavadi' daily, Mysore 4

56th Year of Publication

★

News, Views, Dharmic Moral Ethical Matters

ರಾಷ್ಟ್ರದಲ್ಲಿ ಪ್ರಥಮ
ಸ್ವರ್ಣ ಜಯಂತ್ಯುತ್ಸವ
ಸಂವತ್ಸರವೀಕ್ಷಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಆಡಳಿತವನು ಕಾರ್ಮಿಕರಿಗೆ ವಹಿಸುವ ಕಾಲ ಈಗ ಬಂದಿದೆ

The day Money ceases to Rule he world tyranically many of he man's ills will be cured. Bernard s h a w wrote t h a t wealth is not weal-th but ill-th.

ರಾಜ್ಯಪಾಲರ ಸಲಹೆ

ಕಾರ್ಮಿಕರ ಬೇಡಿಕೆಗಳಿಗೆ ಒಪ್ಪಿಗೆ ನೀಡುವುದು ಅಸಾಧ್ಯವೆಂದು ಆಡಳಿತ ವರ್ಗಕ್ಕೆ ಕಂಡುಬಂದರೆ, ಆಡಳಿತ ವ್ಯವಸ್ಥೆಯನ್ನು ಕಾರ್ಮಿಕರಿಗೆ ವಹಿಸುವ ಕಾಲ ಈಗ ಬಂದಿದೆ ಎಂದು ತಮಿಳುನಾಡು ರಾಜ್ಯಪಾಲರಾದ ಶ್ರೀ ಕೆ ಕೆ ಷಾರವರು ಮದ್ರಾಸಿನಲ್ಲಿ ತಿಳಿಸಿದರು. ಆಡಳಿತ ವ್ಯವಸ್ಥೆಯಲ್ಲಿ ಕಾರ್ಮಿಕರಿಗೆ ಹೆಚ್ಚು ಹೆಚ್ಚು ಅವಕಾಶ ಮತ್ತು ಲಾಭ ಕೊಡುವ ಮೂಲಕ ಇದನ್ನು ಜಾರಿಗೆ ತರಬಹುದೆಂದು ಅವರು ತಿಳಿಸಿದರು.

★

ಶ್ರೀಮಾಓಗೆ ತೊಂದರೆ

ಮೂವತ್ತು ತಿಂಗಳು ಹಳೆಯ ಶ್ರೀಮಾಓ ನೇತೃತ್ವದ ಸಂಯುಕ್ತ ಮಂತ್ರಿಮಂಡಲ ಕೈಗಾರಿಕೆ ಅಶಾಂತಿ, ರಾಜಕೀಯ ಚಳುವಳಿ ಹಾಗೂ ಜನತಾ ಚಳುವಳಿ ಅಸಹನೆಯನ್ನು ಎದುರಿಸಬೇಕಾಗಿದೆ ಎಂದು ಕೊಲಂಬೊ ವಾರ್ತೆ ತಿಳಿಸುತ್ತದೆ.

★

ಸರ್ಕಾರದ ಒಪ್ಪಿಗೆ

ಕಾಲಿನಿಂದ ತುಳಿಯುವ ರಿಕ್ಷದ ಬದಲು ಮೋಟಾರ್‌ನಿಂದ ಕೂಡಿದ ಸೈಕಲ್ ರಿಕ್ಷಗಳನ್ನು ನವ ದೆಹಲಿಯಲ್ಲಿ ಜಾರಿಗೆ ತರಲು ಸರ್ಕಾರ ಒಪ್ಪಿದೆ.

● ಇಸ್ರೇಲು ದಾಳಿಯಿಂದ 260 ಮಂದಿ ಸಿರಿಯದವರು ಸತ್ತಿದ್ದಾರೆ.

ಮಾಂಗಲ್ಯ ತ್ಯಾಗ

ಕಡಪ— ರಾಜಂಪೇಟೆಯ ಚಂಗಯ್ಯ ಎಂಬಾತನ ಪತ್ನಿ ಸುರಪು ಕಾಂತಮ್ಮನು ತನ್ನ ಗಂಡ ಮತ್ತು ಮಕಳಿಗೆ ಆಹಾರ ಒದಗಿಸಲೂ ಮತ್ತು ತಾನು ವಿದ್ಯುತ್ ಪ್ರಾಜೆಕ್ಟಿನಲ್ಲಿ ಕೆಲಸಕ್ಕೆ ಶ್ರೀ ಶೈಲಕ್ಕೆ ಹೋಗಲು ಬಸ್ ಚಾರ್ಜಿಗಾಗಿ ತನ್ನ ಮಾಂಗಲ್ಯ ಸೂತ್ರವನ್ನು ರೂ. 30 ಕ್ಕೆ ಮಾರಿದಳು.

★

ಸಿ ಐ ಡಿ ತನಿಖೆ

ನಾಗ್ಪುರದಲ್ಲಿ ಕಳೆದ ತಿಂಗಳು ಆದ ನರ ಹತ್ಯೆ ಕುರಿತು ಸಿ ಐ ಡಿ ವಿಚಾರಣೆಗೆ ಮಹಾರಾಷ್ಟ್ರ ಸರ್ಕಾರ ಆಜ್ಞೆ ಮಾಡಿದೆ.

★

ಬಿರುಗಾಳಿ ವೇಗ

ಪೂರಿ ಹತ್ತಿರ ಬೀಸಿದ ಬಿರುಗಾಳಿವೇಗ ಗಂಟೆಗೆ ನೂರ ಇಪ್ಪತ್ತೈದು ಕಿಲೋ ಮೀಟರು ಇತ್ತು.

★

ಪರಮಾಣು ಕ್ಷಿಪಣಿ

ಲಂಡನ್— ಮಾಸ್ಕೋಗೆ ಮತ್ತು ಏಷ್ಯದ ಅನೇಕ ಭಾಗಗಳಿಗೆ ಹೊಡೆಯಬಲ್ಲ ಪರಮಾಣು ಕ್ಷಿಪಣಿಯನ್ನು ಈಗ ಚೀನ ಹೊಂದಿರಬಹುದೆಂದು ಅಂತರರಾಷ್ಟ್ರೀಯ ರಕ್ಷಣಾ ಸರ್ವೇ ತಿಳಿಸಿದೆ.

★

ಶ್ರೀಮಾವೋ ಮಂತ್ರಿಮಂಡಲ

ಕೊಲಂಬೊ— 30 ತಿಂಗಳವು ಪ್ರಥಮ ಬಾರಿಯಾಗಿ ಕೈಗಾರಿಕಾ ಅಶಾಂತತೆ, ರಾಜಕೀಯ ಚಳವಳಿ, ಸಾರ್ವಜನಿಕ ಅತೃಪ್ತಿ ರಾಷ್ಟ್ರೀಯ ಅಶಾಂತತೆ ಎದುರಿಸಬೇಕಾದ ಪರಿಸ್ಥಿತಿ ಒದಗಿದೆ.

ಮಿತ್ರನಿಗೆ ಪತ್ರ

ನವದೆಹಲಿ— 15 ವರ್ಷಗಳ ಕೆಳಗಿನ ಮಕ್ಕಳು "ಮಿತ್ರನಿಗೆ ಪತ್ರ" ವಿಷಯದಲ್ಲಿ ಅಂಚೇತಂತೀ ಇಲಾಖೆ ಏರ್ಪಡಿಸಿದ್ದ 'ಪತ್ರ ಬರೆಯುವ ಸ್ಪರ್ಧೆ" ಯಲ್ಲಿ ಪಿಲಾಂಗಿನ ವಿನ್ಯಾ ನಿವೇದಿತಾ ಬೊರಾಳು ಅಸ್ಸಾಂ ಭಾಷೆಯಲ್ಲಿ ಬರೆದ ಪತ್ರಕ್ಕೆ ಪ್ರಥಮ ಬಹುಮಾನ ರೂ. 500, ಮದ್ರಾಸಿನ ಗಿರಿಮೇಲಾ ವಸುಮತಿ ತೆಲುಗು ಭಾಷೆಯಲ್ಲಿ ಬರೆದ ಪತ್ರಕ್ಕೆ ಎರಡನೇ ಬಹುಮಾನ ರೂ. 300 ದೊರೆಯಿತು; ಹಿಂದಿ ಮತ್ತು ಮಲೆಯಾಳಿ ಭಾಷೆಯಲ್ಲಿನ ಎರಡು ಪತ್ರಗಳಿಗೆ ತಲಾ ರೂ. 150 ದೊರೆಯಿತು.

★

ಆಕರ್ಷಣೀಯವಾಪಸಾನೆ

ಕಲ್ಲೀಕೋಟೆ— ಈಚೆಗೆ ವೈನಾಡು ಅರಣ್ಯಗಳಲ್ಲಿ ಹಿಡಿಯಲಾದ ಗೋವಿಂದ ಆನೆಯ ಮರಿ ಆಕರ್ಷಣೀಯವಾಗಿದೆ — ಡೆಲ್ಲಿಯಲ್ಲಿ ನಡೆಯುವ ಏಷ್ಯಾ ಮೇಳದಲ್ಲಿ ಒಳ್ಳೇ ಆಕರ್ಷಣೀಯ ಸುಸ್ವಾಗತ ನೀಡುವ ವ್ಯಕ್ತಿಯಾಗಲಿದೆ — ಅದು ಧ್ವಜ ಹಾರಿಸಬಲ್ಲದು; ಗಣ್ಯರಿಗೆ ಹಾರಹಾಕಿ, ಸ್ವಾಗತಿಸಬಲ್ಲದು; ಅನೇಕ ರೀತಿಯ ಕಸರತ್ ಆಟ ಆಡಬಲ್ಲದು — ಇದು ನವೆಂಬರ್‌ನಲ್ಲಿ ಡೆಲ್ಲಿಗೆ ಹೋಗಲಿದೆ.

●

ದಿವ್ಯವಾಣಿ

ಮದುವೆಗೆ ಮುಂಚೆ ನಿನ್ನ ಕಣ್ಣುಗಳನ್ನು ಚೆನ್ನಾಗಿ ತೆರೆದಿರಿ; ನಂತರ ಅರ್ಧ ಮುಚ್ಚಿರಿ. — ಥಾಮಸ್ ಫುಲ್ಲರ್

★

ಈಗಿರುವ ಪೋಪ್ "ಪೋಪ್" ಅಲ್ಲವಂತೆ

ಕೊಚ್ಚಿ— ಈಗಿರುವ 6 ನೇ ಪೋಪ್ ಪಾಲ್ ಕ್ಯಾಥಲಿಕ್ ಚರ್ಚಿನ ನಿಜವಾದ ಪೋಪ್ ಅಲ್ಲವೆಂದೂ, ಫ್ರಾನ್ಸ್‌ನಲ್ಲಿ ವಾಸಿಸುತ್ತಿರುವ ಕ್ಲಿಮೆಂಟ್ ಎಕ್ ಬಿ ನಿಜವಾದ ಪೋಪ್ ಎಂದೂ ಸಹಸ್ರಾರು ಕ್ಯಾಥಲಿಕ್‌ರಿಗೆ ಹಸ್ತಪತ್ರಿಕೆಗಳು ಹಂಚಲಾಯಿತು.

★

ಕೇಂದ್ರದಿಂದ ಅಂದಾಜು

ಅನಾವೃಷ್ಟಿಪೀಡಿತ ಗುಲ್ಬರ್ಗಾ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಈ ತಿಂಗಳು 12 ಮತ್ತು 13-14 ರಂದು ಪರಿಹಾರಕುರಿತು ಕೇಂದ್ರ ಅಧ್ಯಯನ ತಂಡ ಅಂದಾಜು ಮಾಡುವುದೆಂದು ಬೆಂಗಳೂರು ವಾರ್ತೆ.

ಮಸ್ತಕಾಭಿಷೇಕ

ಬೆಳಕೆರೆ ಸಮೀಪದ ಗೊಮ್ಮಟಗಿರಿಯಲ್ಲಿ ಈ ತಿಂಗಳು 17 ನೇ ತಾ. ಗೋಮಟೇಶ್ವರಸ್ವಾಮಿಯವರಿಗೆ ಮಸ್ತಕಾಭಿಷೇಕ ನಡೆಯಲಿರ್ಪಾಟಾಗಿದೆ. ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್, ಸಾರಿಗೆ ಮಂತ್ರಿ ಶ್ರೀ ಅಜೀಜ್ ಸೇಟ್ ಮತ್ತು ವಿಧಾನ ಸಭೆ ಸ್ಪೀಕರ್ ಶ್ರೀ ಕೆ. ಎಸ್. ನಾಗರತ್ನಮ್ಮ ಅವರು ಭಾಗವಹಿಸುವರು.

ಗುಮಾಸ್ತೆಯ ಸಾವು

ಮೈಸೂರು ಲಕ್ಷ್ಮೀವಿಲಾಸ ಅಗ್ರಹಾರ ವಾಸಿ ಮೈಸೂರು ವಿಶ್ವವಿದ್ಯಾಲಯದ ಗುಮಾಸ್ತರಾದ ಶ್ರೀ ಎ. ಕೆ. ಗಣಪತಿ ಶಾಸ್ತ್ರಿ ಎಂಬವರು ಔಷಧವೆಂದು ತಪ್ಪು ತಿಳಿವಳಿಕೆಯಿಂದ ತಿಗಣೆ ಔಷಧಿ ಕುಡಿದು ಕೆ ಆರ್ ಆಸ್ಪತ್ರೆಯಲ್ಲಿ ಮರಣ ಹೊಂದಿದರೆಂದು ವರದಿ ಆಗಿದೆ.

★ಭೂ ಪರಿಮಿತಿ ಉತ್ಪಾದನೆಗಳಿಗೆ ಅಡ್ಡಿ ಆಗದಂತೆ ಇರಬೇಕೆಂದು ಲೋಕೋಪಯೋಗಿ ಮಂತ್ರಿ ಶ್ರೀ ಹೆಚ್. ಎಂ ಚನ್ನಬಸಪ್ಪನವರು ರಾಯಚೂರಿನಲ್ಲಿ ತಿಳಿಸಿದರು.

ಸಿನಿಮಾದಲ್ಲಿ ಅಶ್ಲೀಲ

ಭಾರತೀಯ ಚಲನಚಿತ್ರಗಳಲ್ಲಿ ಅಶ್ಲೀಲ ದೃಶ್ಯಗಳಿಗೆ ಅವಕಾಶವಿರಬೇಕೆಂಬ ಸೆನ್ಸಾರ್ ಮಂಡಲಿಯ ವಿಚಾರಣಾ ಸಮಿತಿ ನೀಡಿರುವ ಸಲಹೆಗಳನ್ನು ಕೇಂದ್ರ ಸರಕಾರವು ವಿಮರ್ಶೆಗಾಗಿ ರಾಜ್ಯ ಸರಕಾರ ಮತ್ತು ಚಿತ್ರೋದ್ಯಮ ಸಂಸ್ಥೆಗಳಿಗೆ ಕಳುಹಿಸಿದ್ದು, ಬಹುತೇಕ ರಾಜ್ಯ ಸರಕಾರಗಳೂ ಇದನ್ನು ವಿರೋಧಿಸಿವೆ.

ಆಂಧ್ರಪ್ರದೇಶ, ಉತ್ತರ ಪ್ರದೇಶ, ಹರ್ಯಾಣ, ಮತ್ತು ಪಶ್ಚಿಮ ಬಂಗಾಳಗಳು ಚುಂಬನ, ನಗ್ನತೆಗೆ ವಿರೋಧಿಸಿವೆ ; ಕೇರಳ, ಪಾಂಡಿಚೆರಿಗಳು ಇದಕ್ಕೆ ಒಪ್ಪಿದುಂ ಉಳಿದ ರಾಜ್ಯಗಳು ಅಭಿಪ್ರಾಯ ವ್ಯಕ್ತಪಡಿಸಿಲ್ಲ

ಭಾರತೀಯ ಚಲನಚಿತ್ರ ನಿರ್ಮಾಪಕರ ಸಂಘ ಮತ್ತು ದಕ್ಷಿಣ ಭಾರತೀಯ ಚಲನಚಿತ್ರಮಂಡಲಿಗಳು ಇದನ್ನು ಅನುಮೋದಿಸಿದರೂ ಕೆಲವೊಂದು ತಿದ್ದುಪಡಿಗಳನ್ನು ಸೂಚಿಸಿವೆ.

★

ಬಂದೂಕದ ಲೈಸೆನ್ಸ್

ನವದೆಹಲಿ — ಬಂದೂಕ ಹೊಂದಿರುವ ಮಾಜಿ ರಾಜರು ಮತ್ತು ಅವರ ಸಂಸಾರದವರು ಮೂರು ತಿಂಗಳುಗಳಲ್ಲಿ ಸರಿಯಾದ ಲೈಸೆನ್ಸು ಪಡೆಯಬೇಕೆಂದು ಕೇಂದ್ರ ಸರಕಾರ ಸೂಚಿಸಿದೆ.

ವುಡ್‌ಲ್ಯಾಂಡ್ 8 9 72 ರಿಂದ ಆನೋಫ಼್ ಪ್ರಾರಂಭ

ಫಿಲಂಯುಗ ಅರ್ಪಿಸುವ

ಆಂಖೊ ಆಂಖೊ ಮೆ

ಹಿಂದಿ ಈಸ್ಟ್‌ಮನ್ ಕಲರ್

ಪಾತ್ರ : ರಾಖಿ, ರಾಖೇಶ್ ರೋರ್ಷ ಮತ್ತು ಪ್ರಾಣ್

ಬೆಳಗಿನ ಪ್ರದರ್ಶನ 10-30 ಕ್ಕೆ ತೀಸ್ರಿ ಮಂಜಿಲ್

ಅಪೆರಾ 2 ನೇ ವಾರ

— ಆತ್ಯಮೋಫ಼ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಬುಡ್ಡಾ ಮಿಲ್ ಗಯಾ

ನಟವರ್ಗ— ನವೀನ್ ನಿಶ್ಚಲ್, ಅರ್ಚನಾ, ಸೋನಿಯಾ ಸಹಾನಿ
ಓಂ ಪ್ರಕಾಶ್, ಲಲಿತಾ ಪವಾರ್
ಪ್ರತಿ ದಿನ 3 ಪ್ರದರ್ಶನಗಳು

ಮಾನವನು ಕೀಳು ಸೃಷ್ಟಿಯ ಧಣಿ, ಶ್ರಿಷ್ಠನೆನ್ನುವುದು ಸೊಕ್ಕಿನ' ಕಲ್ಪನೆ
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈದೇಶ ಹೊತ್ತ ಚಿತ್ರ ಸಂದೇಶ್ ರವರ ಚೊಚ್ಚಲು ಚಿತ್ರ

★

ಅನೆ-ಹುಡುಗ

SHAKTI SUDHA

A Superb Tonic

ಅಖಿಲಭಾರತದಲ್ಲಿ ಕೂಡಲೇ



ಗೋವಧೆ ನಿಷೇಧವಾಗಲಿ

Potect the Cow

Help The Gorakshana

— Humanitarian Propoganda Monthly ....

Quality Printing Neat Binding

Lakshminarasimha Press

Sivarampet, Mysore

Edited. Printedand Published by Dharmapracharanirata M S Krishna Rao (Propretor) at the Satyavadi Press Chamarajapuram Mysore